ಎನ್ನುವಾಗ ಕಂಪನಾಳ ಮೆಸೇಜ್ ಬಂತು...

'ಏಯ್ ಅಚ್ಛೂ...'

'ಆ ಕವಿ ಪುಂಗವಂಗೆ ನಂಬರ್ ಕೊಟ್ಯಾ? ಐದ್ ನಿಮಿಷದಿಂದ ಮೆಸೇಜ್ ಮಾಡ್ತಿದಾನೆ...' ಎಂದು ಕಳಿಸಿದ್ದಳು, ಜೊತೆಗೆ,

'ಇಲ್ನೋಡು
ಈ ಮಟ ಮಧ್ಯಾಹ್ನ
ಸಂಜೆಯ ತಿಳಿಗಪ್ಪು ಬಣ್ಣವನ್ನು
ಕದ್ದು ಹಚ್ಚಿಕೊಂಡುಬಿಟ್ಟಿದೆ...
ನೀನು ತುಟಿ ಬಿಚ್ಚಲಾರೆ?
ಮುಗಿಲು ಎವೆ ಮುಚ್ಚಲಾರದು...
ಹನಿಗಳು ಕೊರೆದ ಎದೆ ಮೇಲೆ ಹಸಿರ ಬರೆದು ನಕ್ಕಿದೆ ಪ್ರೀತಿ...
ಅಂತ ಕವಿತೆ ಕಳ್ಸಿದಾನೆ...

ಈ ಮಿಸ್ಟರ್ ಗರಗಸ ಸರ್ ಎಕನಾಮಿಕ್ಸ್ ಕ್ಲಾಸಲ್ಲಿ ಇಂಥದ್ದೊಂದು ಟ್ವಿಸ್ಟ್ ಇರತ್ತೆ ಅನ್ಕೊಂಡಿರ್ಲಿಲ್ಲಾ...' ಎನ್ನುವ ಕಂಪಾನಳ ಮೆಸೇಜ್ ನೋಡಿ ಅಚಲಾ ನಕ್ಕಳು. ಅದು ಖುಷಿಗೋ? ನೋವಿಗೋ? ಅವಳಿಗೂ ತಿಳಿದಿಲ್ಲ... ಪಕ್ಕದಲ್ಲಿ ಕೂತವನನ್ನು ನೋಡುವಷ್ಟು ಶಕ್ತಿ ಇಲ್ಲದೆ ಎದ್ದು ಬಾಗಿಲಿನತ್ತ ನಡೆದು, ಬಸ್ ನಿಲ್ಲುತ್ತಿದ್ದಂತೆ ಕೆಳಗಿಳಿದಳು.

ಆ ಜೋರು ಮಳೆಯಲ್ಲಿ ನೆನೆದು ಎದೆ ಉರಿಯನ್ನು ಸ್ವಲ್ಪವಾದರೂ ಕಮ್ಮಿಯಾಗಿಸಿಕೊಳ್ಳೋಣ ಎನಿಸಿದರೂ ಹಾಗೆ ಮಾಡಲಾಗದೇ ಕೊಡೆ ಬಿಡಿಸಿಕೊಂಡು ಮನೆಯತ್ತ ನಡೆದಳು...

ಕಡೆಗೂ ಹರಿದ ಮುಗಿಲನ್ನು ಅವಳಿಂದ ಹೊಲಿಯಲಾಗಲಿಲ್ಲ, ಹರಿದ ಕಣ್ಣ ರೆಪ್ಪೆಗಳನ್ನೂ ಸಹ...

**ಚೈತ್ರಿಕಾ ಶ್ರೀಧರ ಹೆಗಡೆ**

ಊರು–ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕಂಚೀಮನೆ. ವಿದ್ಯಾಭ್ಯಾಸ– ಬಿ.ಕಾಂ ಪದವಿ. ಕತೆ, ಕವಿತೆಗಳನ್ನ ಬರೆಯುವುದರಲ್ಲಿ ಮೊದಲಿಂದಲೂ ಆಸಕ್ತಿ. ಈಗ ಕಿರುತೆರೆ ಧಾರಾವಾಹಿ ಒಂದಕ್ಕೆ ಸಂಭಾಷಣೆ ಬರೆಯುವ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ.